## ಮುನ್ನೋಟ

### ಮಾರ್ಚ್ 23, ಶನಿವಾರ

#### ಕಥೆ ಕೇಳೋಣ ಬನ್ನಿ

ಕಲಾಸುರುಚಿ ಸಂಸ್ಥೆಯು ಮಾರ್ಚ್ 23ರಂದು ಸಂಜೆ 4.30ಕ್ಕೆ ಕಥೆ ಕೇಳೋಣ ಬನ್ನಿ ಕಾರ್ಯಕ್ರಮ ಏರ್ಪಡಿಸಿದೆ.

ಕುವೆಂಪುನಗರದ ಚಿತ್ರಭಾನು ರಸ್ತೆಯಲ್ಲಿರುವ ಸುರುಚಿ ರಂಗಮನೆಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ಶೈಕ್ಷಣಿಕ ಸಲಹೆಗಾರರಾದ ಮಧು ಭಾರದ್ವಾಜ್ ಕಥೆ ಹೇಳುವರು. ಮಾಹಿತಿಗೆ ಮೊ.9972829130 ಸಂಪರ್ಕಿಸಬಹುದು.

#### 'ಮುಳುಗಡೆ' ನಾಟಕ ಪ್ರದರ್ಶನ

ಮೈಸೂರಿನ ರಂಗಾಂತರಂಗ ಸಾಮಾಜಿಕ ಶೈಕ್ಷಣಿಕ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಶನಿವಾರ (ಮಾರ್ಚ್ 23) ಕೀರ್ತಿರಾಜ್ ಅವರ ನಿರ್ದೇಶನದಲ್ಲಿ, ಗಣೇಶ ಅಮೀನಗಡ ಅವರ ರಚನೆಯ 'ಮುಳುಗಡೆ' ನಾಟಕ ಪ್ರದರ್ಶನವನ್ನು ಹಮ್ಮಿಕೊಂಡಿದೆ.

ಅಂದು ಸಂಜೆ 6.30ಕ್ಕೆ ರಾಮಕೃಷ್ಣನಗರದಲ್ಲಿರುವ ನಟನ ರಂಗಶಾಲೆಯಲ್ಲಿ ನಾಟಕ ಪ್ರದರ್ಶನವಾಗಲಿದ್ದು, ಸಮಾಜವಾದಿ ಪ.ಮಲ್ಲೇಶ್ ಉದ್ಘಾಟಿಸಲಿದ್ದಾರೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ.ಎನ್.ಎಂ.ತಳವಾರ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಪ್ರೊ.ಟಿ.ಟಿ.ಬಸವನಗೌಡ, ವಿದ್ವಾನ್ ವೀರಭದ್ರಯ್ಯ ಹಿರೇಮಠ, ರಂಗಕರ್ಮಿ ಮಂಡ್ಯ ರಮೇಶ್ ಭಾಗವಹಿಸಲಿದ್ದಾರೆ. ಮಾಹಿತಿಗೆ ಮೊ.9739919004 ಸಂಪರ್ಕಿಸಬಹುದು.

#### 'ರಾಶಿಚಕ್ರ' ನಾಟಕ ಪ್ರದರ್ಶನ

ರಾಮಕೃಷ್ಣನಗರದಲ್ಲಿರುವ ಮಂಡ್ಯರಮೇಶ್ ಅವರ ನಟನ ರಂಗಶಾಲೆಯಲ್ಲಿ ಮಾರ್ಚ್ 23ರಂದು ಸಂಜೆ 6.30ಕ್ಕೆ 'ರಾಶಿಚಕ್ರ' ನಾಟಕ ಪ್ರದರ್ಶನವನ್ನು ಹಮ್ಮಿಕೊಂಡಿದೆ.

ಈ ನಾಟಕವು ಏಕವ್ಯಕ್ತಿ ಹಾಸ್ಯ ಪ್ರಯೋಗದೊಂದಿಗೆ ಮೂಡಿಬರಲಿದ್ದು, ರಂಗಕರ್ಮಿ ಯಶವಂತ ಸರದೇಶಪಾಂಡೆ ಅವರೇ ನಿರ್ದೇಶಿಸಿ ಅಭಿನಯಿಸಿದ್ದಾರೆ.

ಇದು ಮರಾಠಿ ಮೂಲದ ನಾಟಕವಾಗಿದ್ದು, ವಿವೇಕ ಕಾತರಕಿ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ವಿಭಿನ್ನ ರಾಶಿಗಳ ಜನರ ಮುಖ್ಯ ಗುಣಗಳನ್ನು ವಿಡಂಬನಾತ್ಮಕವಾಗಿ ಪರಿಶೀಲಿಸಿ, ಪರಸ್ಪರ ಸಂಬಂಧಗಳನ್ನು ಹಾಸ್ಯ ನೋಟದಿಂದ ಅವಲೋಕಿಸಿದ್ದಾರೆ. ಮನುಷ್ಯರು ಅಂದಮೇಲೆ ತಮ್ಮದೇ ವಿಶಿಷ್ಟವಾದ ಪ್ರಬಲ ಹಾಗೂ ದುರ್ಬಲ ಗುಣಗಳಿರುತ್ತವೆ. ಪರಸ್ಪರ ಸಂಬಂಧಗಳಲ್ಲಿ ಈ ವೈಪರಿತ್ಯವನ್ನು ಹಾಸ್ಯದ ದೃಷ್ಟಿಕೋನದಲ್ಲಿ ನೋಡಿದಾಗ, ಹಾವಭಾವ ಪೂರಿತವಾಗಿ ಪ್ರಸ್ತುತಪಡಿಸಿದಾಗ ಹೇಗಿರುತ್ತದೆ ಎಂಬುದು ನಾಟಕದ ಸಾರಾಂಶ.

#### 'ಕುದುರೆ ಮೊಟ್ಟೆ' ನಾಟಕ ಪ್ರದರ್ಶನ

ಪರಸ್ಪರ ಆರ್ಟ್ ಫೌಂಡೇಷನ್ ವತಿಯಿಂದ ಮಾರ್ಚ್ 23ರಂದು 'ಕುದುರೆ ಮೊಟ್ಟೆ' ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಅಂದು ಸಂಜೆ 7ಕ್ಕೆ ಕಲಾಮಂದಿರ ಆವರಣದ ಕಿರುರಂಗಮಂದಿರಲ್ಲಿ ನಾಟಕ ಪ್ರದರ್ಶನ ಕಾಣಲಿದ್ದು, ಬೇಲೂರು ಕೃಷ್ಣಮೂರ್ತಿ ವಿರಚಿತ ನಾಟಕವು ಕಿರಣ್ ಗಿರ್ಗಿ ಅವರ ನಿರ್ದೇಶನದಲ್ಲಿ ಮೂಡಿಬರಲಿದೆ.

ಇದು ಗಾಂಪತನವನ್ನೇ ಮುಖ್ಯವಾಗಿರಿಸಿಕೊಂಡು ರಚಿಸಲ್ಪಟ್ಟಿರುವ ನಗೆ ನಾಟಕವಾಗಿದೆ. ಆಶ್ರಮವೊಂದರಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಶಿಷ್ಯರು ಹಾಗೂ ಪಾಠ ಹೇಳುವ ಗಾಂಪ ಗುರುವಿನಿಂದ ನಾಟಕ ಚಿತ್ರಿಸಿಕೊಳ್ಳುತ್ತದೆ. ಯಾಂತ್ರಿಕವಾಗಿ ಅರ್ಥವಾಗದ ಶಿಕ್ಷಣ ವಿದ್ಯಾರ್ಥಿಗಳಿಗೆ ವರ್ಗಾವಣೆಯಾದಲ್ಲಿ ಆಗುವ ಪರಿಣಾಮಗಳು ಹಾಸ್ಯದ ಮೂಲಕ ಹೊರಹೊಮ್ಮಲಿದೆ ಎನ್ನುವುದು ನಾಟಕದ ಕಥಾಹಂದರ.

### ಮಾರ್ಚ್ 24, ಭಾನುವಾರ

#### ಐತಿಹಾಸಿಕ ನಾಟಕ ಕೃತಿ ಬಿಡುಗಡೆ

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಹಾಗೂ ಮಹಿಮಾ ಪ್ರಕಾಶನದ ವತಿಯಿಂದ ಮಾರ್ಚ್ 24ರಂದು ಬಿ.ಶಾಮಸುಂದರ ಅವರ 'ಅಲ್ಲಾವುದ್ದೀನ್ ಖಿಲ್ಜಿ' ಮತ್ತು 'ಕುವರಲಕ್ಷ್ಮ' ಐತಿಹಾಸಿಕ ನಾಟಕ ಕೃತಿ ಬಿಡುಗಡೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಸಂಜೆ 10.30ಕ್ಕೆ ಕಲಾಮಂದಿರದ ಮನೆಯಂಗಳ ವಿಭಾಗದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಇತಿಹಾಸ ಪ್ರಾಧ್ಯಾಪಕ ಡಾ.ಲ.ನಾ.ಸ್ವಾಮಿ ಪುಸ್ತಕ ಬಿಡುಗಡೆ ಮಾಡುವರು. ಕೃತಿ ಕುರಿತು ನಿವೃತ್ತ ಪ್ರಾಧ್ಯಾಪಕ ಡಾ.ಎಸ್.ಎನ್.ರಂಗಾರಾಜು ಮಾತನಾಡುವರು. ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕದ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಅಧ್ಯಕ್ಷತೆ ವಹಿಸುವರು.

#### ವಿಶೇಷ ಸ್ವಾತಿ ಪೂಜೆ

ಜಯಲಕ್ಷ್ಮಿಪುರಂನ ಕಾಳಿದಾಸ ರಸ್ತೆಯಲ್ಲಿರುವ ಮೇಲುಕೋಟೆ ಯದುಗಿರಿ ಯತಿರಾಜ ಶಾಖಾ ಮಠದ ಲಕ್ಷ್ಮಿನರಸಿಂಹಸ್ವಾಮಿ ದೇವಸ್ಥಾನದಲ್ಲಿ ಫೆ.24ರಂದು 'ಸ್ವಾತಿ' ವಿಶೇಷ ಪೂಜೆಯನ್ನು ಆಯೋಜಿಸಲಾಗಿದೆ.

ಅಂದು ಬೆಳಿಗ್ಗೆ 7.30ಕ್ಕೆ ಮಹಾ ಸುದರ್ಶನ ಸಂಕಲ್ಪ ಹೋಮ, ವಿಶೇಷ ಅಭಿಷೇಕ ಸೇವೆ, ಮಧ್ಯಾಹ್ನ 12.30ಕ್ಕೆ ಯದುಗಿರಿ ಯತಿರಾಜ ಸ್ವಾಮೀಜಿ ಅವರಿಗೆ ವಿಶೇಷ ಅಲಂಕಾರ ಸೇವೆ, ಮಧ್ಯಾಹ್ನ 1ಕ್ಕೆ ಮಹಾ ಮಂಗಳಾರತಿ ಮತ್ತು ತೀರ್ಥಪ್ರಸಾದ ವಿನಿಯೋಗವಿರುತ್ತದೆ.

ಸಂಜೆ 7.30ಕ್ಕೆ ಪ್ರಾಕಾರೋತ್ಸವ ಮತ್ತು ರಾತ್ರಿ 8ಕ್ಕೆ ಮಹಾ



ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗವಿದೆ. ಎಲ್ಲಾ ಭಕ್ತಾದಿಗಳು ಪಾಲ್ಗೊಳ್ಳಬಹುದು.



## ಭರತನಾಟ್ಯ ರಂಗಪ್ರವೇಶ

ನಗರದ ನಾದವಿದ್ಯಾಲಯ ಹಾಗೂ ಬೆಂಗಳೂರಿನ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ವತಿಯಿಂದ ಮಾರ್ಚ್ 24ರಂದು ಸಂಜೆ 6ಕ್ಕೆ ನಾದಬ್ರಹ್ಮ ಸಂಗೀತ ಸಭಾದಲ್ಲಿ ನಾಟ್ಯಗುರು ಮಿತ್ರಾ ನವೀನ್ ಅವರ ಶಿಷ್ಯೆ ಆರ್.ಮೇಘನಾ ಭರತನಾಟ್ಯ ರಂಗ ಪ್ರವೇಶ ಮಾಡಲಿದ್ದಾರೆ.

ಕಾರ್ಯಕ್ರಮದಲ್ಲಿ ಚೈತನ್ಯ ಯೋಗ ಕೇಂದ್ರದ ಸ್ಥಾಪಕ ಅಧ್ಯಕ್ಷ ಡಾ.ಬಿ.ಪಿ.ಮೂರ್ತಿ, ನರ್ತನ ಶಾಲಾ ಸಂಘದ ಸ್ಥಾಪಕ ನಿರ್ದೇಶಕರಾದ ವಿದುಷಿ ವಿಜಯಮೂರ್ತಿ, ಸುಗಮ ಸಂಗೀತ ಕಲಾವಿದ ಮೈಸೂರು ಮಹಾಲಿಂಗು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ನಂತರ ನೃತ್ಯ ಗುರು ಮಿತ್ರಾ ನವೀನ್ ಅವರು ನೃತ್ಯ ಪ್ರದರ್ಶಿಸಲಿದ್ದು, ಇವರಿಗೆ ಗಾಯನದಲ್ಲಿ ವಿದ್ವಾನ್ ಎಂ.ಎಸ್.ನವೀನ್, ಮೃದಂಗದಲ್ಲಿ ವಿದ್ವಾನ್ ಎಂ.ಜೆ.ಕಿರಣ್, ಕೊಳಲಿನಲ್ಲಿ ವಿದ್ವಾನ್ ರಾಜೇಶ್ ಮುದಗಂದೂರು ಹಾಗೂ ಪಿಟೀಲಿನಲ್ಲಿ ವಿದ್ವಾನ್ ಎಂ.ಆರ್.ಶ್ರೀಕಾಂತ್ ಸಹಕರಿಸಲಿದ್ದಾರೆ.

### ಮಾರ್ಚ್ 26, ಮಂಗಳವಾರ

#### ಗಾಂಧಿ ಕವಿಗೋಷ್ಠಿ



ಮೈಸೂರು ವಿ.ವಿ ಮಾನಸಗಂಗೋತ್ರಿಯ ಗಾಂಧಿ ಅಧ್ಯಯನ ಕೇಂದ್ರ, ಗಾಂಧಿಭವನ ಹಾಗೂ ನವದೆಹಲಿಯ ಸಾಹಿತ್ಯ ಅಕಾಡೆಮಿ ವತಿಯಿಂದ ಮಾರ್ಚ್ 26ರಂದು ಗಾಂಧಿ ಕವಿಗೋಷ್ಠಿಯನ್ನು ಆಯೋಜಿಸಲಾಗಿದೆ.

ಬೆಳಿಗ್ಗೆ 10.30ಕ್ಕೆ ಗಾಂಧಿ ಭವನ ಆವರಣದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ನವದೆಹಲಿಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ ಚಾಲನೆ ನೀಡುವರು. ಅತಿಥಿಗಳಾಗಿ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಕವಿ ಡಾ.ಸಿದ್ದಲಿಂಗಯ್ಯ ಭಾಗವಹಿಸಲಿದ್ದು, ಕುಲಪತಿ ಪ್ರೊ. ಜಿ.ಹೇಮಂತ ಕುಮಾರ್ ಅಧ್ಯಕ್ಷತೆ ವಹಿಸುವರು. ರಂಗಕರ್ಮಿ ಎಚ್.ಜನಾರ್ದನ್ ಆಶಯಗೀತೆ ಹಾಡುವರು. ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಎಂ.ಎಸ್.ಶೇಖರ್ ಪ್ರಾಸ್ತಾವಿಕ ನುಡಿಗಳನ್ನಾಡುವರು. ಈ ವೇಳೆ ವಿವಿಧ ಜಿಲ್ಲೆಯ 16 ಕವಿಗಳು ಮಹಾತ್ಮ ಗಾಂಧೀಜಿ ಕುರಿತ ಕವಿತೆಗಳನ್ನು ವಾಚಿಸುವರು.

# ಉನ್ನಯನ ಮಾಡುವ ಸೀಮಂತ

**ತಾರೋಡಿ ಸುರೇಶ**

ಪುಂಸವನದ ನಂತರದ ಸಂಸ್ಕಾರವಿದು. ಇದು ಗರ್ಭಿಣಿ-ಸ್ತ್ರೀಸಂಸ್ಕಾರ. ಆದ್ದರಿಂದ ಒಮ್ಮೆ ಮಾಡಿದರೆ ಸಾಕು. ಪ್ರತಿಗರ್ಭಕ್ಕೂ ಬೇಕಿಲ್ಲ. ಇದರ ಪೂರ್ಣಹೆಸರು 'ಸೀಮಂತೋನ್ನಯನ'. ತಲೆಯ ಮಧ್ಯರೇಖೆಗೆ ಸೀಮಂತ-ಬೈತಲೆ ಎಂದು ಹೆಸರು. ಕೇಶವೇಶದ ಮಧ್ಯದ ಎಲ್ಲೆಕಟ್ಟಿನ ಜಾಗ. ಎಲ್ಲೆ ಎಂದರೆ ಸೀಮೆ ಎಂದರ್ಥ. ಆ ಸೀಮಂತವನ್ನು ಉನ್ನಯನ ಅಂದರೆ ಮೇಲಕ್ಕೆ ಎತ್ತಿ ಬಾಚುವುದು ಈ ಸಂಸ್ಕಾರದ ಪ್ರಮುಖ ಅಂಗ.

ಮೇಧೆ, ಯಶಸ್ಸು, ಪ್ರಜ್ಞಾ ಮತ್ತು ತೇಜಸ್ಸು ಇರುವ ಶಿಶು ಹುಟ್ಟಬೇಕು. ಇಂತಹ ವಿಶೇಷ ಶಕ್ತಿಗಳು ಶಿಶುವಿನಲ್ಲಿದ್ದಾಗ ಅವುಗಳನ್ನು ಅಪಹರಿಸುವ ದುಷ್ಟಶಕ್ತಿಗಳಿಂದ ರಕ್ಷಣೆ ದೊರೆಯಬೇಕು. 'ಜ್ಞಾನಪೂರ್ಣತೆಯಿಂದ ಕೂಡಿದ ಸರ್ವಾಂಗ ಸುಂದರವಾದ ಸಂತಾನವಾಗಬೇಕು. ಆ ಪೂರ್ಣತೆಯಲ್ಲಿ ಆತ್ಮಚೈತನ್ಯ, ಆತ್ಮಗುಣ, ದೇಹಪುಷ್ಟಿ ಎಲ್ಲವೂ ಇರುತ್ತದೆ' ಎಂದು ಶ್ರೀರಂಗ ಮಹಾಗುರುಗಳು ತಿಳಿಸಿದ್ದರು. ಮಹರ್ಷಿಗಳು ತಂದುಕೊಟ್ಟ ಯಾವುದೇ ಕರ್ಮಗಳಲ್ಲಿಯೂ ಆತ್ಮಧರ್ಮ, ಮನೋಧರ್ಮ ಮತ್ತು ದೇಹಧರ್ಮಗಳೂ ಎಲ್ಲವೂ ಅರಳಲು ಬೇಕಾದ ವಿಜ್ಞಾನವಿರುತ್ತದೆ ಎಂಬುದನ್ನು ಮರೆಯುವಂತಿಲ್ಲ. ಕೊನೆಯಲ್ಲಿ 'ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ' ಎಲ್ಲವೂ ಈಶ್ವರನಲ್ಲಿ ಲಯಗೊಳ್ಳಬೇಕು. ಇಲ್ಲಿ ವಿಧಿಸಿರುವ ಮಂತ್ರ, ತಂತ್ರ ದ್ರವ್ಯಗಳೆಲ್ಲವೂ ಇದಕ್ಕೆ ಪೂರಕವಾಗಿವೆ.



ಗರ್ಭಸ್ಪಂದನವಾದ ನಂತರ ಮೂರು ಅಥವಾ ನಾಲ್ಕನೇ ತಿಂಗಳಲ್ಲಿ, ಶುಕ್ಲಪಕ್ಷ, ಪುರುಷ ನಕ್ಷತ್ರಗಳಲ್ಲಿ ಸೀಮಂತವನ್ನು ನಡೆಸುವುದು ಉತ್ತಮ. ಹಗಲಿನಲ್ಲಿಯೇ ಮಾಡಬೇಕು. ವೃಷಭದ ಚರ್ಮ, ಭೂತದಅತ್ತಿ ಮರದ ಕಾಯಿಗಳ ಗೊಂಚಲು, ಮತ್ತು ಮೂರು ಬಿಳೀಚುಕ್ಕಿಗಳಿರುವ ಅಥವಾ ಪರ್ವಗಳಿರುವ ಶಲಲೀ (ಮುಳ್ಳುಹಂದಿಯ ಮುಳ್ಳು) ಗಳನ್ನು ಹೊಂದಿಸಿಕೊಳ್ಳಬೇಕು. ಆದರೆ ಶಲಲಿಯನ್ನು ಗೃಹದ ಒಳಗೆ ಇಡಕೂಡದು. ಅದರಿಂದ ಕಲಹ ಉಂಟಾಗುತ್ತದೆ ಎಂಬ ಅಭಿಪ್ರಾಯವಿದೆ. ಹಾಗೆಯೇ, ಮೂರು ದರ್ಭೆಗಳಿಂದ ಹೆಣೆದ ಮೂರು ಪುಂಜಗಳು ಸಿದ್ಧವಿರಬೇಕು.

ಅಂದು, ಮಂಗಳಸ್ನಾನ, ಹೊಸವಸ್ತ್ರಗಳ ಧಾರಣೆ, ನಂತರ ಪುಣ್ಯಾಹ ಮತ್ತು ಸಂಕಲ್ಪ ಮಾಡಬೇಕು. ಆಮೇಲೆ, ಕಂಕಣಬಂಧ, ಇಷ್ಟದೇವತಾ ಪೂಜೆ ಹಾಗೂ ಎಂಟು ನಿರ್ದಿಷ್ಟ ಮಂತ್ರದೊಂದಿಗೆ ಹೋಮ. ಧಾತಾ, ರಾಕಾ, ನೇಜಮೇಷ ಮತ್ತು ಪ್ರಜಾಪತಿ-ದೇವತೆಗಳನ್ನು ಸ್ತುತಿಸುವ ಮಂತ್ರಗಳಿವು. ದೇವತೆಗಳ ಪ್ರಸನ್ನತೆ ಆವಶ್ಯಕ.

ಪತಿಪತ್ನಿಯರು ಕ್ರಮವಾಗಿ ಪೂರ್ವ-ಪಶ್ಚಿಮಾಭಿಮುಖವಾಗಿ ಕುಳಿತುಕೊಳ್ಳಬೇಕು. ಕಾಯಿಗಳಿಂದ ಕೂಡಿದ ಅತ್ತಿ ಗೊಂಚಲು, ಶಲಲೀ ಮತ್ತು ದರ್ಭೆಗಳ 3 ಪುಂಜಗಳು ಇವುಗಳೆಲ್ಲವನ್ನೂ ಒಟ್ಟಿಗೆ ಸೇರಿಸಿ ಹಿಡಿದುಕೊಂಡು, ಲಲಾಟಸಂಧಿಯಿಂದ ಆರಂಭಿಸಿ ಬೈತಲೆಯ ಹಿಂಭಾಗದವರೆಗೂ ರೇಖೆ ಪೂರ್ತಿ ಬರುವಂತೆ ಪತಿಯು ಬಾಚುತ್ತಾನೆ. ಉನ್ನಯನವನ್ನು ಮೂರು ಭಾರಿ ಮಾಡಬೇಕು. ಉನ್ನಯನವು ಊರ್ಧ್ವಸ್ಥಿತಿಗೆ ನಯನ ಮಾಡುವ ಮರ್ಮವನ್ನೊಳಗೊಂಡಿರುತ್ತದೆ.

ಇಲ್ಲೆಲ್ಲಾ ಮೂರರ ಸಂಯೋಜನೆಯನ್ನು ನೋಡುತ್ತೇವೆ. ಮೂರು ಲೋಕಗಳಿಗೂ ವ್ಯಾಪಿಸುವಂತಹ ಕರ್ಮವಿದು. ನಂತರ ಅವಕ್ಕೂ ಮೂಲವಾದ ಪ್ರಣವದಲ್ಲಿ ಮುಕ್ತಾಯಗೊಳ್ಳಬೇಕು.ಆದ್ದರಿಂದ 'ಓಂ ಭೂರ್ಭುವಸ್ಸುವರೋಂ' ಎನ್ನುವ ಮಂತ್ರದ ಅನುಸಂಧಾನವಿರುತ್ತದೆ. ಆದಿಯಲ್ಲಿಯೂ ಪ್ರಣವ, ಮಧ್ಯೆ ಅದರಿಂದ ವಿಕಾಸಗೊಂಡ ಮೂರು ಲೋಕಗಳು ಮತ್ತು ಕೊನೆಯಲ್ಲಿ ಪುನಃ ಪ್ರಣವದಲ್ಲಿಯೇ ವಿಲೀನ. ಇದು ಕೇವಲ ಇಂದ್ರಿಯಕ್ಷೇತ್ರದ ವ್ಯವಹಾರ ಮಾತ್ರವಲ್ಲ. ಹಾಗೂ ಈ ಮೂರೂ ಪದಾರ್ಥಗಳ ಸಂಯೋಜನೆಯಲ್ಲಿ. ಒಂದರ ದೋಷವನ್ನು ಇನ್ನೊಂದು ನಿವಾರಿಸಿ ಉದ್ದೇಶಿತ ಫಲವನ್ನು ಪೂರ್ಣವಾಗಿ ನೀಡುವ ಯೋಗ ಕೂಡಿಬರುತ್ತದೆ.

(ಮುಂದುವರೆಯುತ್ತದೆ)

# ಹದಗೆಡದಿರಲಿ ಆರೋಗ್ಯ ವ್ಯವಸ್ಥೆ



ಒಂದನೇ ಪುಟದಿಂದ

### ಫ್ರಿಡ್ಜ್‌ನಲ್ಲಿಟ್ಟ ಆಹಾರ ಒಳ್ಳೆಯದಲ್ಲ

ಎಲ್ಲದಕ್ಕೂ ಫ್ರಿಡ್ಜ್ ಬಳಸುವುದು ಒಳ್ಳೆಯದಲ್ಲ. ಫ್ರಿಡ್ಜ್‌ನಿಂದ ತೆಗೆದು ಬಹಳ ಹೊತ್ತಿನ ತನಕ ಇಡಬಾರದು ಮತ್ತು ಆಹಾರವನ್ನು ಸ್ವಲ್ಪ ಬಿಸಿ ಮಾಡಿ ಸೇವಿಸಬೇಕು. ಫ್ರಿಡ್ಜ್‌ನಿಂದ ತೆಗೆದ ಆಹಾರಕ್ಕೆ ಹೊರಗಿನ ಉಷ್ಣಾಂಶದ ಪ್ರಭಾವದಿಂದಾಗಿ ಬ್ಯಾಕ್ಟೀರಿಯಾ ಸೇರಿಸಿಕೊಂಡು ಹಲವು ರೋಗಗಳಿಗೆ ಕಾರಣವಾಗುತ್ತವೆ. ತರಕಾರಿ, ಮೊಸರು, ಮಜ್ಜಿಗೆ ಸೇರಿದಂತೆ ಬೇಗ ಕೆಡುವ ಪದಾರ್ಥಗಳನ್ನು ಫ್ರಿಡ್ಜ್‌ನಲ್ಲಿ ಇಡಬಹುದು. ಆದರೂ ಸಹ ಆರೋಗ್ಯದ ದೃಷ್ಟಿಯಿಂದ ಫ್ರಿಡ್ಜ್ ಆಹಾರ ಅತೀ ಕಡಿಮೆ ಮಾಡಿದರೆ ಉತ್ತಮ.

### ಎ.ಸಿ. ಹಿತ–ಮಿತವಾಗಿರಲಿ

ಕಚೇರಿಯೊಳಗೆ ಕುಳಿತು ಕೆಲಸ ಮಾಡುವವರು ಸಹಜವಾಗಿ ಎ.ಸಿ. ರೂಮಿನಲ್ಲಿದ್ದೇವೆಂದು ನೀರು ಕುಡಿಯುವುದನ್ನೇ ಮರೆಯುತ್ತಾರೆ. ಹಾಗೆ ಮಾಡಿದರೆ ಬಿಸಿಲಿಗೆ ಬಂದಾಗ ತೊಂದರೆಯಾಗುವುದು. ಎ.ಸಿ. ರೂಮಿನಲ್ಲಿದ್ದರೂ ಕಾಲ ಕಾಲಕ್ಕೆ ನೀರು ಕುಡಿಯುತ್ತಲೇ ಇರಬೇಕು.

ಬಿಸಿಲು ಜಾಸ್ತಿ ಎನಿಸಿದರೂ ಎ.ಸಿ.ಯನ್ನು ಕೂಡ 23–24 ಡಿಗ್ರಿ ಸೆಲ್ಷಿಯಸ್‌ಗೆ ಇಡಬೇಕು. ಹೊರಗಡೆ ಉಷ್ಣಾಂಶ ತುಂಬಾ ಹೆಚ್ಚಿರುವುದರಿಂದ ಕಚೇರಿಯಿಂದ ಹೊರಗಡೆ ಬಂದಾಗ ಆರೋಗ್ಯದ ಮೇಲೆ ತಕ್ಷಣವೇ ದುಷ್ಪರಿಣಾಮ ಉಂಟಾಗುತ್ತದೆ ಎನ್ನುತ್ತಾರೆ ವೈದ್ಯರು.

# ಈಡೇರುವ ಭರವಸೆಯ ನಿರೀಕ್ಷಿಸೋಣ

**ಜನದನಿ**

ಲೋಕಸಭೆ ಚುನಾವಣೆಯ ಕಾವು ಎಲ್ಲೆಡೆ ಏರತೊಡಗಿದೆ. ಆರೋಪ ಪ್ರತ್ಯಾರೋಪಗಳೂ, ಟೀಕೆ ಟಿಪ್ಪಣಿಗಳೂ ಹೆಚ್ಚತೊಡಗಿವೆ. ಇನ್ನೂ ಹಲವು ಸ್ಪರ್ಧಾಳುಗಳು ನಾಮಪತ್ರ ಸಲ್ಲಿಸಬೇಕಿದೆ. ಈ ಮಧ್ಯೆ ಹಲವರಿಗೆ ಚುನಾವಣೆ ಎಂಬುದು ಪ್ರತಿಷ್ಠೆಯ ಕಣವಾಗಿ ಪರಿಣಮಿಸಿದೆ. ವಿಷಯಾಧರಿತ ಚುನಾವಣೆಗಿಂತ ವೈಯಕ್ತಿಕ ಆರೋಪಗಳೇ ಮುನ್ನೆಲೆಗೆ ಬರುವಂಥ ಸ್ಥಿತಿಯೂ ಇದೆ. ಜತೆಗೆ ಭರವಸೆಗಳಿಗೇನೂ ಕೊರತೆಯಿಲ್ಲ. ಈ ಎಲ್ಲದರ ಬಗ್ಗೆ ಮೈಸೂರಿನ ಮತದಾರರು 'ಮೆಟ್ರೊ' ಜತೆ ವ್ಯಕ್ತಪಡಿಸಿದ ಅಭಿಪ್ರಾಯಗಳು ಇಲ್ಲಿವೆ.

### ಎಚ್ಚರ ಅಗತ್ಯ



ಈ ಹಿಂದಿನ 16 ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು ಮತ್ತು ಮತದಾರರು ಕಲಿಯಬಹುದಾಗಿದ್ದ ಪಾಠಗಳನ್ನು ಈ ಸಂದರ್ಭದಲ್ಲಿ ಮತ್ತೆ ನೆನಪಿಸಿಕೊಳ್ಳಬೇಕಾದ ಅಗತ್ಯವಿದೆ. ಆರಂಭದ ಹಲವು ವರ್ಷಗಳಲ್ಲಿ ಪ್ರಚಾರಕ್ಕೆ ಮತ್ತು ಮತದಾರರ ಮನವೊಲಿಸಲು ರಾಜಕೀಯ ಪಕ್ಷಗಳು ಅನುಸರಿಸುತ್ತಿದ್ದ ದಾರಿಯ ಬಗ್ಗೆಯೂ ನಾವು ಅವಲೋಕನ ಮಾಡಿಕೊಳ್ಳಬೇಕಾದ ಅಗತ್ಯ ಇದೆ. ಒಟ್ಟಿನಲ್ಲಿ ಈ ಬಾರಿಯ ಚುನಾವಣೆ ಬಲು ಎಚ್ಚರದ ಹಾದಿಯಲ್ಲಿ ನಡೆಯಬೇಕಿದೆ.

**ಅಶೋಕ್,** ಜಯನಗರ

### ಅತಿರೇಕದ ಪ್ರಚಾರ



ಇಂದು ಭಾವೋದ್ವೇಗಕ್ಕೆ ಒಳಗಾಗುವಂಥ ರೀತಿಯಲ್ಲಿ ಪ್ರಚಾರ ನಡೆಯುತ್ತಿದೆ. ಪಕ್ಷಗಳ ಕಾರ್ಯಕರ್ತರ ಮಧ್ಯೆ ಪರಸ್ಪರ ವೈಷಮ್ಯ ಹುಟ್ಟಿಸುವಂತಹ ಅತಿರೇಕದ ಪ್ರಚಾರಗಳು ಹಿಂದೆ ನಡೆಯುತ್ತಿರಲಿಲ್ಲ. ಆದರೆ, ಇತ್ತೀಚಿನ ವರ್ಷಗಳಲ್ಲಿ ಚುನಾವಣೆ ಸಂದರ್ಭದಲ್ಲಿ ಹಣ ಮತ್ತು ಮದ್ಯದ ಹೊಳೆಯೇ ಹರಿಯುತ್ತಿದೆ. ಜತೆಗೆ ಮತದಾರರ ಜಾತಿ, ಧರ್ಮ, ಪ್ರದೇಶಗಳ ಹಿನ್ನೆಲೆಯಲ್ಲಿ ರಾಜಕೀಯ ಲಾಭ ಪಡೆಯುವ ಕುತಂತ್ರಗಳೂ ಹೆಚ್ಚಾಗಿವೆ. ಇಂಥವುಗಳಿಗೆ ಕಡಿವಾಣ ಹಾಕಿ ಮಾದರಿ ಚುನಾವಣೆ ಈ ಬಾರಿ ನಡೆಯುವ ಅಗತ್ಯವಿದೆ.

**ಬಿ.ಕೆ.ಜಯರಾಮ್,** ಉದಯಗಿರಿ

### ನೈತಿಕ ಅಧಿಕಾರ ಕಳೆದುಕೊಳ್ಳಬಾರದು



ಮತದಾರ ತನ್ನ ಕರ್ತವ್ಯದಲ್ಲಿ ಪ್ರಾಮಾಣಿಕನಾಗಿದ್ದರೆ ಜನಪ್ರತಿನಿಧಿಯನ್ನು ಪ್ರಶ್ನಿಸುವ ನೈತಿಕ ಅಧಿಕಾರ ಆತನಿಗೆ ಲಭ್ಯವಾಗುತ್ತದೆ. ಇಲ್ಲವಾದರೆ ಮತದಾರರ ಮನೋಭಾವಕ್ಕೆ ತಕ್ಕಂತಹ ದುಷ್ಟ ಸರ್ಕಾರಗಳೇ ಲಭ್ಯವಾಗುತ್ತವೆ. ಚುನಾವಣೆ ಎನ್ನುವುದು ಪ್ರಜಾಪ್ರಭುತ್ವದ ಆತ್ಮವಿಮರ್ಶೆಯ ಕಾಲವೂ ಹೌದು ಎನ್ನುವುದನ್ನು ಮರೆಯಬಾರದು. ಮತದಾರ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಬಾರದು.

**ಲೋಕೇಶ್,** ಜಯನಗರ

### ಭರವಸೆಗಳಿಗೆ ಮರುಳಾಗದಿರಿ



ಚುನಾವಣೆ ಸಂದರ್ಭದಲ್ಲಿ ಎಲ್ಲ ಪಕ್ಷಗಳೂ, ಎಲ್ಲ ಮುಖಂಡರೂ ಭರವಸೆ, ಆಶ್ವಾಸನೆಗಳ ಮೂಲಕ ಮತದಾರನ್ನು ಮರುಳು ಮಾಡಲು ಮುಂದಾಗುತ್ತಾರೆ. ಆಕರ್ಷಕವಾದ ಆಸೆಗಳನ್ನು ಹುಟ್ಟಿಸಿ ತಮ್ಮ ಕಡೆ ಮತ ಸೆಳೆಯುವ ತಂತ್ರ ಅನುಸರಿಸುತ್ತಾರೆ. ಆದರೆ ಈ ಬಗ್ಗೆ ಎಚ್ಚರಿಕೆಯ ಹೆಜ್ಜೆಯನ್ನು ಇಡುವುದು ಸಾಮಾಜಿಕ ವ್ಯವಸ್ಥೆಯ ದೃಷ್ಟಿಯಲ್ಲಿ ಉತ್ತಮ.

**ಮುರಳಿ,** ಕುವೆಂಪುನಗರ

### ಸಾಧನೆಯ ಪ್ರಶ್ನಿಸೋಣ



ಯಾವುದೇ ಪಕ್ಷದ ಅಭ್ಯರ್ಥಿಗಳು ಮನೆ ಬಾಗಿಲಿಗೆ ಬಂದು ಮತಯಾಚಿಸಿದಾಗ ಅವರ ಸಾಧನೆಗಳನ್ನು, ಕನಸುಗಳನ್ನು ಪ್ರಶ್ನಿಸಬೇಕು.
ಏಕೆಂದರೆ ಈಗ ಆಡಳಿತ ನಡೆಸುತ್ತಿರುವ, ಹಿಂದೆ ನಡೆಸಿರುವ ವಿವಿಧ ಪಕ್ಷಗಳ ಸರ್ಕಾರಗಳು ತಮ್ಮ ಪ್ರಣಾಳಿಕೆಯಲ್ಲಿ ಘೋಷಿಸಿಕೊಂಡಿದ್ದ ಯಾವೆಲ್ಲ ಅಂಶಗಳನ್ನು ಈಡೇರಿಸಿವೆ ಎಂಬುದರ ಬಗ್ಗೆ ಪ್ರಶ್ನಿಸಿ ಅವರನ್ನು ಎಚ್ಚರಗೊಳಿಸಬೇಕು.

**ಪ್ರದೀಪ್,** ರಾಮಕೃಷ್ಣನಗರ

### ವರ್ತನೆಗೂ ಮಿತಿ ಇರಲಿ



ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳೂ ಹೆಚ್ಚು ಜನಪ್ರಿಯವಾಗಿದ್ದು, ಹಲವು ವಿಚಾರಗಳ ವೈಭವೀಕಣ ನಡೆಯುತ್ತಿರುತ್ತದೆ. ಪಕ್ಷವನ್ನು, ಪಕ್ಷದ ಕೆಲವು ಮುಖಂಡರನ್ನು, ಅಭ್ಯರ್ಥಿಗಳನ್ನು ಆಕ್ಷೇಪಾರ್ಹವಾಗಿ ಬಿಂಬಿಸುವ ಪ್ರವೃತ್ತಿಯೂ ನಡೆಯುತ್ತಿರುತ್ತದೆ. ಈ ದಿಸೆಯಲ್ಲಿ ಪಕ್ಷಗಳ ಮುಖಂಡರು ತಮ್ಮ ಕಾರ್ಯಕರ್ತರಿಗೆ ಈ ವಿಚಾರಗಳ ಬಗ್ಗೆ ಮಾಹಿತಿ ನೀಡಬೇಕು. ಯಾವುದೇ ವ್ಯಕ್ತಿಯ ಚಾರಿತ್ರ್ಯಕ್ಕೆ ಧಕ್ಕೆಯಾಗುವಂಥ ಟೀಕೆ ಇರಬಾರದು.

**ಪ್ರಸಾದ್,** ಕುಂಬಾರಕೊಪ್ಪಲು

### ಅಭಿವೃದ್ಧಿ ಯೋಜನೆ ಮುಖ್ಯವಾಗಲಿ



ಅಭಿವೃದ್ಧಿ ಯೋಜನೆಗಳ ಬಗ್ಗೆ ಮಾತನಾಡುವಂತೆ ರಾಜಕಾರಣಿಗಳನ್ನು ಒತ್ತಾಯಿಸಬೇಕು. ಹಿಂದಿನ ಸಲದ ಚುನಾವಣೆಯಲ್ಲಿ ಪಕ್ಷಗಳು ನೀಡಿದ ಭರವಸೆಗಳು ಏನಾಗಿವೆ, ಅವುಗಳಲ್ಲಿ ಎಷ್ಟು ಈಡೇರಿವೆ, ಈಡೇರಿಲ್ಲವಾದರೆ ಅವುಗಳಿಗೆ ಕಾರಣಗಳೇನು ಎನ್ನುವುದನ್ನು ತಿಳಿದುಕೊಳ್ಳುವ ಹಕ್ಕು ಎಲ್ಲ ಮತದಾರರಿಗೂ ಇದೆ. ಮತದಾರರು ವಿಷಯಾಧಾರಿತವಾಗಿ ಪ್ರಶ್ನಿಸತೊಡಗಿದರೆ ರಾಜಕೀಯ ಪಕ್ಷಗಳು ಕೂಡಾ ಎಚ್ಚೆತ್ತುಕೊಳ್ಳುತ್ತವೆ.

**ಸಬಿತಾ,** ಒಂಟಿಕೊಪ್ಪಲು

### ಸಮಸ್ಯೆಗಳ ಅನಾವರಣವಾಗಲಿ

ನಿರುದ್ಯೋಗ, ಭ್ರಷ್ಟಾಚಾರ, ಕೃಷಿ ಕ್ಷೇತ್ರದ ಸಮಸ್ಯೆಗಳು, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಮಸ್ಯೆಗಳು ಪ್ರಚಾರದ ವಿಷಯಗಳಾಗಬೇಕು. ಅದನ್ನು ಬಿಟ್ಟು ಮತದಾರರೇ ಹಣ, ಜಾತಿ ಮತ್ತು ಮದ್ಯದ ಬೆನ್ನುಹತ್ತಿ ಹೋದರೆ, ಆಯ್ಕೆಯಾಗುವ ಜನಪ್ರತಿನಿಧಿಯಿಂದ ಯಾವ ಒಳ್ಳೆಯ ಕೆಲಸವನ್ನೂ ನಿರೀಕ್ಷಿಸಲಾಗದು.

**ವಿರೂಪಾಕ್ಷ,** ಪಡುವಾರಹಳ್ಳಿ

### ಆಮಿಷಗಳಿಗೆ ಅಂಕುಶ ಇರಲಿ

ಚುನಾವಣಾ ಆಯೋಗವು ರಾಜಕೀಯ ಪಕ್ಷಗಳು ಮತ್ತು ಮತದಾರರು ಅನುಸರಿಸಬೇಕಾದ ಮಾದರಿ ನೀತಿಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಅಗತ್ಯವಿದೆ. ವರ್ಷಗಳು ಕಳೆದಂತೆ ಚುನಾವಣೆಯಲ್ಲಿ ಹಣದ ಪಾತ್ರವೇ ಮುಖ್ಯವಾಗುತ್ತಿರುವುದು ಜನತಂತ್ರದ ಆಶಯಗಳನ್ನೇ ಅಣಕಿಸುವಂತಿದೆ. ಅನೇಕ ಸಂದರ್ಭಗಳಲ್ಲಿ ಕೆಲವರಿಗೆ ಹಣ ಮಾಡುವ ಮತ್ತು ಇನ್ನು ಕೆಲವರಿಗೆ ಹಣ ಕರ್ಚು ಮಾಡಲು ಇರುವ ವೇದಿಕೆಯಂತೆ ಚುನಾವಣೆ ತೋರುತ್ತಿದೆ. ಆಮಿಷಗಳ ಮೂಲಕ ನಡೆಯುವ ಮತಯಾಚನೆಗೆ ನಿಯಂತ್ರಣ ಹಾಕಬೇಕು.

**ಜಾನಕಿ, ಗಂಗೋತ್ರಿ ಬಡಾವಣೆ**

ನಿರೂಪಣೆ: ರೇವಣ್ಣ ಎಂ.

## ನಗೆಹನಿ



### ರಾಣಿ ತರಹ ನೋಡ್ಕೋತೀನಿ

**ಹೆಂಡತಿ:** ರೀ ನಿಮಗೆ ರಾಣಿ ಅನ್ನೋ ಮೊದಲನೇ ಹೆಂಡತಿ ಇರುವ ವಿಷಯ ಮದುವೆಗೆ ಮುಂಚೆ ನನಗ್ಯಾಕೆ ಹೇಳಲಿಲ್ಲ?.
**ಗುಂಡ:** ಹೇಳಿದ್ನಲ್ಲ ಚಿನ್ನ...
**ಹೆಂಡತಿ:** ರೀ ಸುಳ್ಳು ಹೇಳಬೇಡಿ, ಯಾವಾಗ ಹೇಳಿದ್ರಿ?
**ಗುಂಡ:** ನಿನ್ನ ರಾಣಿ ತರಹ ಚೆನ್ನಾಗಿ ನೋಡ್ಕೋತೀನಿ ಅಂತ ಹೇಳಿದ್ನಲ್ಲ.....

## ನೀವೂ ಕಳುಹಿಸಿ



'ಮೆಟ್ರೊ' ಕುಂದುಕೊರತೆ, ಕ್ಯಾಂಪಸ್ ಕಲರವ, ಲೇಖನ ಕಳುಹಿಸಲು...
ಇ ಮೇಲ್: mysoremetro@prajavani.co.in

**ವಾಟ್ಸ್‌ಆ್ಯಪ್; 95133 22937**